RegdNo B G 155

10—6—1955

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಶ್ರೀಮನೆಸಂಸ್ಥೇದಾರ್ ಎಂ ಎ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರವಿತ್ತ ಎಂ.ಎಸ್ ಕೃಷ್ಣರಾವ್ 2ಪೈ

ಎಂತಹ ಹೀನ ಕಾರ್ಯ

★

ನಾಗಪುರದಿಂದ ಕೆಲ ದಿನಗಳ ಹಿಂದೆ ಬಂದ ಹೃದಯವಿದ್ರಾವಕ ವಾರ್ತೆಯಿದು.

ಜೊಗಿನಗರದಲ್ಲಿ ಒಬ್ಬ ಕ್ಷೌರಿಕನು ನಾಮದೇವ್ ಎಂಬ 16 ವರ್ಷದ ಯುವಕನನ್ನು ಕತ್ತರಿಯಿಂದ ಚುಚ್ಚಿ ಸಾಯಿಸಿದನು : ಕಾರಣವಿಷ್ಟೇ— ಆ ಕ್ಷೌರಿಕನ ಅಂಗಡಿಗೆ ಕ್ಷೌರಕ್ಕಾಗಿ ನಾಮದೇವನು ಹೋಗಿದ್ದನು, ಅಲ್ಲಿ ಇನ್ನೂ ಗಿರಾಕಿಗಳಿದ್ದುದರಿಂದ ಇವನು ತನ್ನ ಪರ್ತಿಗಾಗಿ ಕಾಯುವೇಕಾದುದು ಕಂಡುಬಂದಿತು ; ಕಡಪ್ಪಾಗುವ ವಿಷಯದಲ್ಲಿ ಇವನಿಗೆ ಸಹನೆ ತಪ್ಪಿತು : ಆಗ, ತಾನು ಇನ್ನೊಂದು ಅಂಗಡಿಗೆ ಹೋಗುತ್ತೇನೆಂದು ಹೇಳಿಯೂ ಅಲ್ಲಿಂದ ಹೊರಟನು : ಇದಕ್ಕೆ ಕುಪಿತನಾದ ಕ್ಷೌರಿಕನು ಅವನ ಎದೆಗೆ ಕತ್ತರಿಯಿಂದ ಚುಚ್ಚಿದನು. ತೀವ್ರ ಗಾಯಗೊಂಡ ನಾಮದೇವನನ್ನು ಆಸ್ಪತ್ರೆಗೆ ಸಾಗಿಸಲಾಗುತ್ತಿದ್ದಾಗ ದಾರಿಯಲ್ಲಿ ಸತ್ತುಹೋದನು.

ಎಂತಹ ಅನ್ಯಾಯ, ಅನೀತಿ ಕಾರ್ಯ!

❁

ಕಾಲರಾ ಪರಿಸ್ಥಿತಿ

ಮೈಸೂರು — ತಾ|| 8 ರಲ್ಲಿ ನಗರದಲ್ಲಿ 8 ಮಂದಿಗೆ ಕಾಲರಾ ತಗುಲಿತೆಂದೂ ಸಾವೇನೂ ಇಲ್ಲವೆಂದೂ, 378 ಕಾಲರಾ ವಿರೋಧ ಇನಾಕ್ಯುಲೇಷನ್ ಹಾಕಲಾಯಿತೆಂದೂ ಹೆಲ್ತ್‌ಆಫೀಸರ ಪ್ರಕಟನೆ ತಿಳಿಸಿತ್ತಿದೆ.

❁

ನಾಳೆಯ ಪಂಚಾಂಗ

ವೈಷ್ಣ ಶಿಷ್ಟಾವಣೆ

ಉಪಾಕರ್ಮ ಮಹಾಮಿದ್ವಾನ್ ಧರ್ಮಾಧಿಕಾರಿ ಲಕ್ಷ್ಮೀಕಾರ್ಯಕರ್ತ, ಜ್ಯೋತಿರ್ವಿದ್ವನ್ಮಣಿ ಪಂಪತ್ಯ ಕೃಷ್ಣಜೋಯಿ ಸಂವರಿಂದ

ಶ್ರಾವಣ ಅಮಾವಾಸ್ಯೆ ಎಳಿಗಳು

ಪುಂಸಭೆ

ಮೈಸೂರು — ಪುಂಸಭೆಯು ಮುಂದಿನ ವರಿದ ಅಧಿವೇಶನವು ಪುಂಸಭಾ ಭವನದಲ್ಲಿ ತಾ|| 14 ಸೋಮವಾರ 4 ಗಂಟೆಗೆ ನಡೆಯುವುದು.

❁

ಮಂಗಳೂರು — ವಿದ್ಯುಚ್ಛಕ್ತಿಯಪಲ್ಲದ ಪಡಿತರವು ಉಡುಪಿಯಲ್ಲಿ ತಾ|| 19 ರಿಂದ ಜಾರಿಗೆ ತರಲಾಗುವುದೆಂದು ಹೆಪ್ಪೀಕಮಿಷನರು ಹೇಳಿದರು

❁

ಶ್ರೀನಗರ — ಹಿಂದೀ ಶಿಕ್ಷಣ ಕೊಡುವ ಪಾಠಶಾಲೆಗಳ ಖರ್ಚಿಗಲ್ಲಿ ಸರಕಾರವು ಶೇಕಡ 75 ನ್ನು ಕೊಡುವುದೆಂದು ಭಾರತ ವಿದ್ಯಾ ಖಾದಸಚಿವರು ಹೇಳಿದರು

★

ಹುಬ್ಬಳ್ಳಿ — ಅಕ್ರಮವಾಗಿ ಮಾರಾಟ ಮಾಡುತ್ತಾನೆಂಬ ಸಂಶಯದ ಮೇಲೆ ಪೋಲೀಸರು ಒಂದು ಟ್ರಾನ್ಸಿಸ್ಟರು ಸೆಟ್ಟನ್ನು ವಶಪಡಿಸಿಕೊಂಡು ಒಬ್ಬನನ್ನು ಬಂಧಿಸಿದರು.

❁

ಬೆಂಗಳೂರು — ಏನೂ ಅರಿಯದಂತೆ ಕಾಣುತ್ತಿದ್ದ ದಕ್ಷಿಣ ಆರ್ಕಾಟಿನ ಈಂಕ್ಯ ಎಸ್ಟ್ರವಳೂ ಅವಳ ಪ್ರೇಮಿಯೂ ದಸ್ತಗಿರಿ ಮಾಡಲ್ಪಟ್ಟರು — ಒಬ್ಬ ಹೆಂಗಸಿಗೆ ಇಮಿಟೇಷನ್ ಆಭರಣಗಳನ್ನು ಧಂಗಾಂಡೆಂದು ಮೋಸಲು ಪ್ರಯತ್ನಿಸುತ್ತಿದ್ದಾಗ ಸಿಕ್ಕಿಬಿದ್ದರು

❁

ಮೈಸೂರು — ಸಿಂಡಿಕೇಟು ಬ್ಯಾಂಕು ಮುಂ ಬ್ಯಾಂಕು ನೌಕರಂ ಸಂಘದ ಸದಸ್ಯರು ಪ್ರದರ್ಶನ ನಡೆಸಿ ಆ ಬ್ಯಾಂಕು ನೌಕರರ ಬೋನಸ್ಸು ಮುಂತಾದ ಕೇಳಿಕೆಗೆ ಬೆಂಬಲಿಸಿದರು

❁

ಬೆಂಗಳೂರು — ಪ್ರತಿ ಮನೆಯಲ್ಲೂ ಒಂದೊಂದು ವಾಲ್ಮೀಕಿ ರಾಮಾಯಣ ವಿರಬೇಕೆಂದು ಶ್ರೀ ದ್ವಾರಕಾ ಜಗದ್ಗುರುಗಳು ಹೇಳಿದರು.

ಸೀಮೇಎಣ್ಣೆ ಬಗ್ಗೆ ಸುಗ್ರೀವಾಜ್ಞೆ

★

ಪಲಕಿಸ್ತಾನ ಕುತಂತ್ರ

ನವದೆಹಲಿ — ಲಡಕ್‌ನಲ್ಲಿ ಚೀನೀಯರನ್ನು ಎದುರಿಸುತ್ತಿರುವ ಭಾರತ ಸೈನ್ಯಕ್ಕೆ ಕಳುಹಿಸಲಾಗುತ್ತಿರುವ ಸಂಚಾರಾಡಿನ ಅಡ್ಡಿಪಡಿಸಲು ಪಾಕಿಸ್ತಾನವು ಕಾಶ್ಮೀರದ ಕಾರಿನಲ್ಲು ಭಾಗದಲ್ಲಿ ಅಗಾಗ ಧಾಳಿ ನಡೆಸುತ್ತಿದೆ.

★

ಮಣ್ಣಿನಲ್ಲಿ ಹೊಕ್ಕುಹೋದರು !

ಬೆಂಗಳೂರು — ನಿನ್ನೆ ನಡೆದ ಹೃದಯ ವಿದ್ರಾವಕ ವಿಷಯ — ಹೆಚ್ ಎ ಎಲ್ ಗೆ ಹೋಗುವ ದಾರಿಯಲ್ಲಿ ದಾವಣ್ಣಾರು ಲೇ ಔಟಿನ ಭೂಮಿ ಕಕ್ಕಲಾಗಿದ್ದ ಮಣ್ಣಿನಲ್ಲಿ ಸಿಕ್ಕಿ 10 ಮಂದಿ ಕೆಲಸಗಾರರು ವ್ಯತಪಟ್ಟರು — ಗಾಯಗೊಂಡ ಕೆಲವರು ಆಸ್ಪತ್ರೆಗೆ ಸಾಗಿಸಲ್ಪಟ್ಟರು — ಮೃತರ ಸಂಸಾರಕ್ಕೆ ಕೂಡಲೇ ತಲಾ ರೂ 500 ಕೊಡುವಂತೆ ಮುಖ್ಯ ಮಂತ್ರಿಗಳು ಆಜ್ಞೆ ಮಾಡಿದರು

❁

ಕಳ್ಳ ಸಾಗಾಣಿಕೆ ಪತ್ತೆಗೆ

ಬೆಂಗಳೂರು — ಮಂಗಳೂರಿನಿಂದ ಕೇರಳಕ್ಕೆ ಮಹಿಳಾ ಪ್ರಯಾಣಿಕರು ಅಕ್ಕಿಯನ್ನು ಅಕ್ರಮವಾಗಿ ಸಾಗಿಸುವುದನ್ನು ಪತ್ತೆಹಚ್ಚಲು ರೈಲಿನಲ್ಲಿ ಸ್ಪೆಷೀ ಪೋಲೀಸರನು ಇಡುವುದಾಗಿ ರೈಲ್ವೇ ಪೋಲೀಸು ಸೂಪರೆಂಟೆಂಡು ಹೇಳಿದರು

❁

ನವದೆಹಲಿ — ರಾಜ್ಯಗಳು 4 ನೇಯ ಪಂಚವಾರ್ಷಿಕ ಯೋಜನೆಗೆ 1250 ಕೋಟಿಗಳನ್ನು ಹೆಚ್ಚಾಗಿ ಒದಗಿಸಿಕೊಳ್ಳಬೇಕೆಂದು ಪ್ಲಾನಿಂಗು ಕಮಿಷನಿನ ಉಪಾಧ್ಯಕ್ಷ ಅಶೋಕ ಮೇಥಾ ಹೇಳಿದರು.

ನವದೆಹಲಿ — ಎಣ್ಣೆ ಕಂಪೆನಿಕೆಲಸಗಾರರ ಸೀಮೇಎಣ್ಣೆ ಮತ್ತು ಡಿಯಸಿಲ್ ಎಣ್ಣೆ ದಾಸ್ತಾನನ್ನು ವಶಪಡಿಸಿಕೊಳ್ಳುವ ಅಧಿಕಾರವನ್ನು ಪಡೆಯಲು ಭಾರತ ಸರಕಾರ ನಿರ್ಧರಿಸಿದೆಯೆಂದೂ ಆ ಬಗ್ಗೆ ಇಂದು ಸುಗ್ರೀವಾಜ್ಞೆ ಹೊರಡಲಿರುವುದೆಂದೂ ತಿಳಿದುಬಂದಿದೆ — ಕಂಪೆನಿಗಳು ಕೃತ್ರಿಮವಾಗಿ ಎಣ್ಣೆ ಹಂಚುವುದ್ ಕಂಡುಬಂದರೆ ಈ ಅಧಿಕಾರ ಜಲಾಯಿಸುವುದಿಲ್ಲವೆಂದೂ ಹೇಳಲಾಗಿದೆ — ಈ ಮಧ್ಯೆ ರಷ್ಯದಿಂದ ಮೂರು ಪೆಸಿಫಿಕ್ ದಾಪರ್ತಿ ಟ್ಯಾಂಕರು ರಷ್ಯಾ ಎಣ್ಣೆ ಬರುತ್ತಿದೆ.

★

ಭಾರತಕ್ಕೆ ಸಾಲಾ -

ವಾಷಿಂಗ್ಟನ್ — ವಿದ್ಯುಚ್ಛಕ್ತಿ ಟ್ರಾನ್ಸಿಸ್ಟರ್ ಸೌಕರ್ಯಗಳನ್ನು ವಿಸ್ತರಿಸಿಕೊಳ್ಳಲು ಭಾರತಕ್ಕೆ 54 ಮಿಲಿಯ ಡಾಲರು ಸಾಲ ಕೊಡಲು ವಿಶ್ವಬ್ಯಾಂಕು ಒಪ್ಪಿದೆಯೆಂದು ಪ್ರಕಟವಾಗಿದೆ.

★

ಹೆಂಕೆ ಅನಾಹುತ

ಬೈದರಾಬಾದು — ವಿಶಾಖಪಟ್ಟಣದ ರೈಲ್ವೆವಾರ್ಡಂ ಗ್ಯಾನುದಲ್ಲಿ ಇಬ್ಬರು ಒಂದು ಮನೆಗೆ ಹೆಂಕೆ ಹಚ್ಚಿಸಿದ ಪರಿಣಾಮವಾಗಿ 300 ಮನೆಗಳು ಸುಟ್ಟು ಇಬ್ಬರು ಜೀವಸಹಿತ ಸುಟ್ಟು ಹೋದರು.

❁

ಉಪಾಧ್ಯಾಯರ ಸಂಬಳ

ಶ್ರೀನಗರ — ಪ್ರಾಥಮಿಕ ಪ್ರೌಢ ವಿಶ್ವವಿದ್ಯಾನಿಲಯದ ಯೂಪ ಉಪಾಧ್ಯಾಯರಿಗೂ ರೂ 175 ಕ್ಕಿಂತ ಕಡಮೆ ಸಂಬಳವಿಲ್ಲದಂತೆ ಉಪಾಧ್ಯಾಯರ ಸಂಘೇಳನದಲ್ಲಿ ನಿರ್ಣಯಿಸಲಾಯಿತು.

ಸಮಯೋಚಿತ ಸೂಕ್ತಿಗಳು

—೦—

ಅಲಂಕಾರವೆಂದರೆ ವಿಷ್ಣುವಿಗೆ ಪ್ರೀತಿ, ಅಭಿಷೇಕದ ಮೇಲೆ ಶಿವನಿಗೆ ಪ್ರೇಮ, ನಮಸ್ಕಾರವನ್ನು ಸೂರ್ಯನು ಮೆಚ್ಚುತ್ತಾನೆ, ಬ್ರಾಹ್ಮಣನಿಗೆ ಊಟವೆಂದರೆ ಬ್ರಾಹ್ಮಣನಿಗೆ ಇಷ್ಟವಾದುದು.

ಕಾಮುಗಳ ಉಪಭೋಗದಿಂದ ಕಾಮವು ಶಾಂತವಾಗುವುದಿಲ್ಲ, ತುಪ್ಪದಿಂದ ಬೆಂಕಿ ಯಂತೆ ಮತ್ತೂ ಹೆಚ್ಚುತ್ತದೆ.

ಇನ್ನೊಬ್ಬರಿಗೆ ಉಪದೇಶ ಕೊಡುವುದರಲ್ಲಿ ಪಾಂಡಿತ್ಯ ತೋರಿಸುವುದು ಸುಲಭ : ಅದರಂತೆ ಧರ್ಮವಿಹಿತವಾದ ಆಚಾರ ನಡೆಸುವುದು ಯಾರೋ ಒಬ್ಬ ಮಹಾತ್ಮನಿಗೆ ಮಾತ್ರ ಸಾಧ್ಯ.

ವಸ್ತುವಿನಿಂದ ಮಾತಿನ ಪಾಪವೇ ಪಾಪ : ಶರೀರದಿಂದ ಮಾಡಿದುದು ಮಾಡಿದಂತಲ್ಲ : ಮಾನವ ದೇಹದಿಂದ ಪತ್ನಿಯು ಆಲಂಘಿಸಲ್ಪಡುವಳೋ ಅದ್ದೇಹದಿಂದ ಮಗಳೂ ಆಲಂಗಿಸಲ್ಪಡುತ್ತಾಳೆ.

ಬೊಕ್ಕಿಯನ್ನು ನೀರಿನಿಂದ ನಿವಾರಿಸಬಹುದು, ಕೊಡೆಯಿಂದ ಬೆಸಿಲನ್ನು ತಡೆಯಬಹುದು, ಮದನೇರಿಂದ ಆನೆಯನ್ನು ಅಂಕುಶದಿಂದ ಬಾಗಿಸಬಹುದು, ದೊಣ್ಣೆಯಿಂದ ದನ ಕತ್ತೆಗಳನ್ನು ತೆಲಿಸಿಬಹುದು, ರೋಗವನ್ನು ಔಷಧದಿಂದ ಹೋಗಲಾಡಿಸಬಹುದು, ವಿಷವನ್ನು ಮಂತ್ರಪ್ರಯೋಗದಿಂದ ತೆಗೆಯಬಹುದು ; ಹೀಗೆ ಎಲ್ಲದಕ್ಕೂ ಮದ್ದು ಇದೆ ; ಆದರೆ ಮೂರ್ಖನಿಗೆ ಮದ್ದೇ ಇಲ್ಲ.

ವಿಷವು ವೆಡಿಲಕಾವುಗಳೂ ನೀರು-ಹಾಲುಗಳ ವೈಶಿಷ್ಟ್ಯ ತಿಳಿಯಬಲ್ಲುವು : ಆದರೆ ಶಂಖಕ್ಕೆ ಮಾತ್ರ-ಆ ಪ್ರಸಿದ್ಧಿ. ಆದುದರಿಂದ ಕೀರ್ತಿಯು ಪುಣ್ಯದಿಂದಲೇ ದೊರಕುವುದು.

— ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ —

Sri 'SATYAVADI' Daily

Oldest Newspaper in the State]— Golden Jubilee 1966

Edited, printed and published by M. S. Krishna Rao (prop) at the Satyavadi Press, Chamarajapuram, Mysore-4.

ವುಡ್‌ಲ್ಯಾಂಡ್ಸ್ 3 ನೇ ವಾರದಲ್ಲಿ

★

ಪೇಕ್ಷಕರಿಂದ ತುಂಬಿತುಳುಕಾಡುವ ಚಿತ್ರವೆಂದಿಂದಲಿಕ್ಷಿಪ್ರದರ್ಶಿತವಾಗುತ್ತಿದೆ

ಸುಂದರ ದೃಶ್ಯಗಳು, ಸವಿಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು,

ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

★

ಜಾನ್‌ವರ್ JANWAR

ನಾಕ್ಯ- ಶಮ್ಮಿ ಕಪೂರ್, ರಾಜಶ್ರೀ, ರಾಜೇಂದ್ರನಾಥ್, ಪೃಥ್ವಿರಾಜ್

ಅಪೆರ— ಅಪೂರ್ವ 2 ನೇ ವಾರ

ಅಕ್ಕಮೋಹ ಕನ್ನಡ ಚಿತ್ರವಂತ್ತ — — ಪ್ರತಿದಿನ 3 ಆಟಗಳು

ನನ್ನ ಕರ್ತವ್ಯ

ತಾರಾಗಣ— ಕಲ್ಯಾಣಕುಮಾರ್, ನಾಗೇಂದ್ರರಾವ್, ನಂಜಿಂಹರಾಜು

ಚಂದ್ರಜಾಬು, ಸಂಧ್ಯಾ, ಜಯ ಲಲಿತ

SHAKTI

SUDHA

A Superb Tonic

[ಗೋರಕ್ಷಣೆ ಪತ್ರಿಕೆಯವರು ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯುತ್ತಿ

ಬಲ್ಲವರು— ಗೋರಕ್ಷಣ ಅಭಿಮಾನಿಗಳು ಪ್ರಾಮಾಣಿಕರಾಗಿರಬೇಕೆಂದು ಬಯಸುವರು ।